ವಿಷಯ ಆಗಿರಲಿಲ್ಲ.

ಜಿ.ಎಂ ನಿವೃತ್ತಿಯಾಗಲು ನಾಲ್ಕು ತಿಂಗಳು ಉಳಿದಿತ್ತು. ಅವರ ಬದಲು ಬೇರೆಯವರು ವಕ್ಕರಿಸಿದ್ದರೆ ನಮ್ಮ ಕಿನ್ನರಿಯನ್ನು ಕೇಳುತ್ತಲೇ ಇರಲಿಲ್ಲ. ಜನರಲ್ ಮ್ಯಾನೇಜರ್ ಕಚೇರಿಗೆ ಫೋನ್ ಮಾಡಿ ಪರ್ಸನಲ್ ಮ್ಯಾಟರ್ ಎಂದು ಹೇಳಿ, ಆದಷ್ಟು ಬೇಗ ಮಾತುಕತೆಗೆ ಸಮಯ ನಿಗದಿ ಮಾಡಲು ತಿಳಿಸಿದೆ.

ಸಂದರ್ಶನಕ್ಕೆ ಅವಕಾಶ ಸಿಕ್ಕ ಸಮಯದಲ್ಲಿ ಜಿ.ಎಂ ಒಳ್ಳೆ ಮೂಡಲ್ಲಿದ್ದರು.

'ಯೂನಿಯನ್‌ನವರ ಹತ್ತಿರ ಏನು ಪರ್ಸನಲ್ ಮ್ಯಾಟರ್?' ಎಂದು ತಮಾಷೆ ಮಾಡಿದರು.

'ಸರ್, ಪರ್ಸನಲ್ ಮ್ಯಾಟ್ರು ನನ್ನದಲ್ಲ, ಬೇರೆಯವರದ್ದು' ಎಂದು ಅವರಿಗೆ ಎಲ್ಲವನ್ನೂ ವಿವರಿಸಿದೆ.

'ನೀವು ಯಾಕೆ ಮಂಡೆ ಬಿಸಿ ಮಾಡುತ್ತೀರಿ. ಬ್ಯಾಂಕಲ್ಲಿ ಬ್ಲೀಡಿಂಗ್ ಆಗಿದ್ದಕ್ಕೆ ಟ್ರೀಟ್‌ಮೆಂಟ್ ಕೊಟ್ಟಾಗಿದೆ. ಇನ್ನು ಅವರ ಹಣೆ ಬರಹ, ನಾವೇನು ಮಾಡ್ಲಿಕ್ಕಾಗುತ್ತದೆ? ಡಿಸ್ಚಾರ್ಜ್ ಮಾಡಿ ಕಳಿಸಿದರೆ ಮುಗೀತು' ಎಂದರು.

ಅವರಿಗೆ ಪರಿಸ್ಥಿತಿಯ ಗಹನತೆ ಅರ್ಥವಾಗಿಲ್ಲ ಎಂದು ಅರಿವಾಯಿತು.

'ಸರ್ ಅವಳಿಗೆ ಕಣ್ಣಿಲ್ಲ, ಸಹಾಯ ಮಾಡುವವರೂ ಇಲ್ಲ. ಅವಳು ಏನಾದರೂ ಮಾಡಿಕೊಂಡರೆ ಕಷ್ಟ. ಪರಿಸ್ಥಿತಿಯನ್ನು ದುರುಪಯೋಗಪಡಿಸಿ ಕೊಳ್ಳುವವರೂ ಇರುತ್ತಾರೆ' ಎಂದೆ.

'ಅದಕ್ಕೆ ಏನು ಮಾಡೋಣ ಅಂತೀರಿ?' ನನ್ನನ್ನೇ ಕೇಳಿದರು.

ನಾನು ಅವರಿಗೆ ಮನದಟ್ಟು ಮಾಡಲು ಪ್ರಯತ್ನಿಸಿದೆ. ಯಾವುದೋ ದುರ್ಬಲ ಗಳಿಗೆಯಲ್ಲಿ ಆಕೆ ಸ್ವನಿಯಂತ್ರಣವನ್ನು ಕಳೆದುಕೊಂಡಿದ್ದಾಳೆ. ಅದಕ್ಕೆ ಅವಳನ್ನು ದೂರಿ, ಏನಾದರೂ ಮಾಡಿಕೊಳ್ಳಲಿ ಎಂದು ಹೇಳುವುದು ತಪ್ಪಾಗುತ್ತದೆ. ಮನುಷ್ಯನಿಗೆ ದೈಹಿಕ ತುಡಿತ ಇರುವುದು ಸಹಜ. ಕಣ್ಣಿದ್ದರೂ ಅಷ್ಟೇ, ಇಲ್ಲದಿದ್ದರೂ ಅಷ್ಟೇ. ಆದರೆ, ಕಣ್ಣಿದ್ದವರಿಗೆ ಇರುವ ಅನುಕೂಲಗಳು ಕಣ್ಣಿಲ್ಲದವರಿಗೆ ಇರುವುದಿಲ್ಲ. ಅವರು ತಮ್ಮನ್ನು ತಾವು ನೋಡಿಕೊಳ್ಳುವುದೇ ಕಷ್ಟ. ಅಂಥದ್ದರಲ್ಲಿ ಮಗುವಾದರೆ ಏನು ಮಾಡಬೇಕು? ಇಷ್ಟಪಟ್ಟೋ, ಪಡದೆಯೋ ಏನೋ ಆಗಿ ಹೋಗಿದೆ. ಒಂದು ಕ್ಷಣದ ಸುಖಕ್ಕಾಗಿ ಜೀವನ ಪೂರ್ತಿ ಒದ್ದಾಡ ಬೇಕಿಲ್ಲ. ಆ ಘಟನೆಗೆ ಕಾರಣ ಯಾರೇ ಆಗಿರಬಹುದು; ಹುಟ್ಟುವ ಮಗುವನ್ನು ನೋಡಿಕೊಳ್ಳಬೇಕಾದವಳು, ಸಾಕಬೇಕಾದವಳು ಹೆಣ್ಣೇ ತಾನೇ? ಹೆಣ್ಣೊಬ್ಬಳು ಅಬಾರ್ಷನ್ ಮಾಡುತ್ತೇನೆ ಎಂದಾಗ ಅವಳ ಭವಿಷ್ಯದ ಕುರಿತು ಯೋಚಿಸಿ ಅವಳ ಪರವಾಗಿ ನಿಲ್ಲುವುದು ಸರಿ ಎನ್ನಿಸುತ್ತದೆ. ಚೈತ್ರಾ ಇದೀಗ ಕೆಲಸಕ್ಕೆ ಸೇರಿ ತನ್ನ ಕಾಲ ಮೇಲೆ ನಿಲ್ಲಲು ಪ್ರಯತ್ನಿಸುತ್ತಿರುವ ನಿರ್ಭಾಗ್ಯೆ...

ಜಿ.ಎಂ ಶಾಂತವಾಗಿ ನನ್ನ ಮಾತುಗಳನ್ನು ಆಲಿಸುತ್ತಿದ್ದರು. 'ಯಾವ ಆಸ್ಪತ್ರೆಯಲ್ಲಿ ಅಡ್ಮಿಟ್ ಮಾಡಿದ್ದೀರಿ?' ಕೇಳಿದರು.

ಆಸ್ಪತ್ರೆಯ ಹೆಸರು ಹೇಳಿದೆ.

'ಸರಿ. ಗೋ ಅಹೆಡ್'

'ಸರ್, ಡಾಕ್ಟರನ್ನು ಒಪ್ಪಿಸುವುದು ಹೇಗೆ? ಅವಳ ರಿಲೇಶನ್ಸ್ ಯಾರೂ ಇಲ್ಲಿಲ್ಲ'

'ಯೋಚನೆ ಮಾಡಬೇಡಿ. ಐ ನೋ ಹಿಮ್. ಡಾಕ್ಟರ್ ಹತ್ರ ಮಾತನಾಡುತ್ತೇನೆ'

'ಸರ್, ಇನ್ನೊಂದು ವಿಷಯ, ಏನಾದರೂ ಹೆಚ್ಚು ಕಮ್ಮಿ ಆದರೆ?'

'ಡೋಂಟ್ ವರಿ. ಅಂತ ಸಂದರ್ಭ ಬಂದಾಗ ನೋಡಿಕೊಳ್ಳೋಣ' ಭರವಸೆ ನೀಡಿದರು.

ನಾನು ವಾಪಾಸು ಬರುವಷ್ಟರಲ್ಲಿ ಜಿ.ಎಂ ಆಸ್ಪತ್ರೆಗೆ ಫೋನ್ ಮಾಡಿದ್ದರು. ಆಪರೇಷನ್‌ಗೆ ಸಿದ್ಧತೆ ನಡೆಸುತ್ತಿದ್ದಾರೆಂದು ಸುಜಾತಾ ತಿಳಿಸಿದರು. ನಾವು ಮುಂದಿನ ಕೆಲವು ಗಂಟೆಗಳನ್ನು ಆತಂಕದಿಂದ ಕಳೆದೆವು. ಆಪರೇಷನ್ ಮುಗಿದು ವಾರ್ಡ್‌ಗೆ ಶಿಫ್ಟ್ ಮಾಡಿದಾಗ ಎದೆಯ ಭಾರ ಇಳಿಯಿತು. ಸುಸ್ತಾದಂತೆ ತೋರುತ್ತಿದ್ದ ಚೈತ್ರಾ ನಮ್ಮ ದನಿ ಕೇಳಿ ನಗುವ ಪ್ರಯತ್ನ ಮಾಡಿದಳು. ನಾನು ಅವಳ ಕೈಗಳನ್ನು ಹಿಡಿದು ಧೈರ್ಯವಾಗಿರಲು ತಿಳಿಸಿದೆ. ನನ್ನ ಮುಂಗೈಯನ್ನು ಗಟ್ಟಿಯಾಗಿ ಹಿಡಿದುಕೊಂಡ ಆಕೆಯ ಮುಖದಲ್ಲಿ ಪ್ರಶಾಂತತೆ ಇತ್ತು.

ನಾನು ಮರೆಯದೆ ಜನರಲ್ ಮ್ಯಾನೇಜರ್‌ಗೆ ಥ್ಯಾಂಕ್ಸ್ ಹೇಳಿದೆ.

'ಅನ್ ಎಥಿಕಲ್ ಅಬಾರ್ಷನ್ ಮಾಡಿಸಿದ್ದೀರಂತ